ಭಾರತದಲ್ಲಿ ತಯಾರಾಗುವ ಉಪ್ಪಿನಲ್ಲಿ ಮುಕ್ಕಾಲು ಭಾಗ ಗುಜರಾತ್‌ನ ಕೊಡುಗೆ. ಅಲ್ಲಿನ ಛೋಟಾ ರಣ್ ಪ್ರದೇಶದಲ್ಲಿ ಅಗರಿಯಾ ಬುಡಕಟ್ಟು ಸಮುದಾಯದವರು ಉಪ್ಪು ತಯಾರಿಸುತ್ತಾರೆ. ಕೋಟ್ಯಂತರ ಜನರ ಊಟಕ್ಕೆ ರುಚಿ ತರುವ ಉಪ್ಪನ್ನು ತಯಾರಿಸುವ ಈ ರೈತರ ಜೀವನದಲ್ಲಿ ಸಿಹಿಗಿಂತಲೂ ಕಹಿಯ ಪಾತ್ರವೇ ಹೆಚ್ಚು. ಉಪ್ಪು ತಯಾರಿಕೆಯ ಚಿತ್ರಣದೊಂದಿಗೆ, ಉಪ್ಪು ಕೃಷಿಕರ ಜೀವನದ ಸ್ಥಿತಿಗತಿಯ ಪಕ್ಷಿನೋಟವನ್ನೂ ಈ ಸಂಚಿಕೆಯ 'ಸುಧಾ' ಮುಖಪುಟ ಬರಹ ಕಟ್ಟಿಕೊಡುತ್ತಿದೆ; ಉಪ್ಪಿನ ಗದ್ದೆಗಳಲ್ಲಿ ಮಡುಗಟ್ಟುವ ಬದುಕಿನ ಬೆವರುಹನಿಗಳನ್ನು ಸಹೃದಯರ ಗಮನಕ್ಕೆ ತರುತ್ತಿದೆ.

■ ಸುಮಂಗಲಾ

